# ಅರ್ಧ ರಾಮ ಪೂರ್ಣ ಶಿವ



**ಕರೀಗೌಡ ಬೀಚನಹಳ್ಳಿ**

ಕಲೆ: ಕುಮಾರ್ ಕಾಟೇನಹಳ್ಳಿ

ಇಬ್ಬರು ಜೊತೆಗಾರರಿದ್ದರು. ಒಬ್ಬನ ಹೆಸರು ರಾಮಪ್ಪ, ಇನ್ನೊಬ್ಬನ ಹೆಸರು ಶಿವಪ್ಪ ಅಂತ. ಇಬ್ಬರೂ ಒಂದೇ ಊರಿನವರು, ಒಂದೇ ವಾರಿಗೆಯವರು, ಒಂದೇ ಜೀವ ಎಂಬಂತೆ ಇರುವವರು. ಬಾಲ್ಯದಲ್ಲಿ ಊರಿನ ಗುರುಕುಲದಲ್ಲಿ ಒಟ್ಟಿಗೆ ನಾಲ್ಕಕ್ಷರ ಕಲಿತವರು. ವಯಸ್ಸಿಗೆ ಬಂದಮೇಲೆ ಮದುವೆಯಾಗಿ ತಂತಮ್ಮ ಸಂಸಾರಗಳ ಜೊತೆ ಬದುಕಿದವರು. ಇಬ್ಬರ ಮನೆತನಗಳು ಪ್ರಧಾನವಾಗಿ ಕೃಷಿ. ಇಬ್ಬರೂ ತಮ್ಮ ಮನೆತನದ ಕೃಷಿ ಜೀವನವನ್ನು ಮುಂದುವರಿಸಿ ಸಾಮಾನ್ಯ ರೈತರಂತೆ ಜೀವಿಸುತ್ತಿದ್ದರು. ಭಂಗ, ಬಡತನ ಏನೂ ಇಲ್ಲದೆ ಸುಖವಾಗಿ ತಮ್ಮ ಬದುಕನ್ನು ನಡೆಸುತ್ತಿದ್ದರು.

ಒಂದುದಿನ ಒಮ್ಮೆ ಇಬ್ಬರೂ ಕಾಶಿಯಾತ್ರೆ ಹೋಗಿ ಬರಲು ನಿರ್ಧರಿಸಿದ್ದರು. ಹರಕೆಗಳನ್ನು ಕಟ್ಟಿಕೊಂಡು ವರ್ಷಗಳು ಉರುಳಿದರೂ ತಂತಮ್ಮ ರೈತಾಪಿ ಕೆಲಸಗಳಿಂದ ಬಿಡುಗಡೆ ಸಿಗದೆ ಕಾಶಿಯಾತ್ರೆ ಕೈಗೊಳ್ಳುವುದನ್ನು ಮುಂದೆ ಮುಂದಕ್ಕೆ ದೂಡುತ್ತಲೇ ಬರುತ್ತಿದ್ದರು. ಆದರೆ ಕಾಶಿಗೆ ಹೋಗಿ ಬರಬೇಕೆಂಬ ಅವರ ಭಕ್ತಿಯ ಹಂಬಲ ಮಾತ್ರ ಇಂಗಿರಲಿಲ್ಲ. ಅವರ ಹೆಂಡತಿಯರು ಮಧ್ಯವಯಸ್ಸಿನಲ್ಲಿಯೇ ಕಾಯಿಲೆಗೆ ತುತ್ತಾಗಿ ತೀರಿಕೊಂಡಿದ್ದರು. ಇದರಿಂದಾಗಿ ಅವರು ಕಾಶಿಗೆ ಹೋಗುವ ಕಾರ್ಯವೂ ವಿಳಂಬವಾಗುತ್ತಾ ಬಂದಿತ್ತು.

ರಾಮ ತುಂಬಾ ಧೈರ್ಯವಂತ. ಪ್ರತಿಯೊಂದು ವಿಷಯವನ್ನೂ ಆತ ತುಂಬಾ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದ. ಆತ ಕೆಟ್ಟ ಚಟಗಳಿಂದ ದೂರವಿದ್ದ. ಊರಿನಲ್ಲಿ ಆತನಿಗೆ ತುಂಬಾ ಗೌರವವಿತ್ತು. ಊರಿನ ಪಂಚಾಯಿತಿಯಲ್ಲಿ ಮುಖಂಡನಾಗಿ ಕೆಲಸ ಮಾಡಿದ್ದ. ಆತ ಕೊನೆಗೆ ಊರಿನ ಯಜಮಾನಿಕೆಯನ್ನು ಬೇರೆಯವರಿಗೆ ವಹಿಸಿಕೊಡುವಾಗ ತನ್ನ ಕಾಲದ ವ್ಯವಹಾರದ ಹಣಕಾಸಿನ ಲೆಕ್ಕಪತ್ರಗಳನ್ನೆಲ್ಲಾ ಅವರಿಗೆ ಪಾರದರ್ಶಕವಾಗಿ ಒಪ್ಪಿಸಿ ಮೆಚ್ಚುಗೆ ಪಡೆದಿದ್ದ. ಆತನಿಗೆ ತನ್ನ ಗಡ್ಡದಲ್ಲಿ ಹಾಗೂ ತನ್ನ ದಟ್ಟ ತಲೆ ಕೂದಲಿನಲ್ಲಿ ಅಲ್ಲಲ್ಲಿ ಬಿಳಿಕೂದಲು ಕಾಣಿಸಿಕೊಳ್ಳುವುದಕ್ಕೆ ಶುರುವಾಗಿತ್ತು. ಅವನಿಗೆ ಇಬ್ಬರು ಗಂಡುಮಕ್ಕಳಿದ್ದರು. ಹಿರಿಯವನಿಗೆ ಮದುವೆ ಮಾಡಿದ್ದ. ಅವನಿಗೆ ಒಬ್ಬಳು ಮಗಳಿದ್ದಳು. ಕಿರಿಯ ಮಗ ಹೇಳದೆ ಕೇಳದೆ ಯಾಕೋ ಮನೆಬಿಟ್ಟು ಸನ್ಯಾಸಿಯಂತೆ ದೇಶಾಂತರ ಹೊರಟು ಹೋಗಿದ್ದ.

ರಾಮನಷ್ಟು ಶಿವ ಶ್ರೀಮಂತನಲ್ಲದಿದ್ದರೂ ಅತಿ ಬಡವನೇನೂ ಆಗಿರಲಿಲ್ಲ. ಆದರೆ ಆತನಿಗೆ ವಂಶಪಾರಂಪರ್ಯವಾಗಿ ಬಂದ ಶ್ರೀಮಂತವಾದ